**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ.ನರಸೀಪುರ.**

**ಸಿಸಿ ಸಂಖ್ಯೆ: 287/2015. ಚಾ.ಸಾ.10. ಪ್ರಾ.ಸಾ-6.**

| | | |
|---|---|---|
| ಹೆಸರು | : | ಮಲ್ಲೇಶ್ |
| ತಂದೆಯ ಹೆಸರು | : | ಲೇಟ್ ಬಸವರಾಜು |
| ವಯಸ್ಸು | : | 47 |
| ವೃತ್ತಿ | : | ವ್ಯಾಪಾರ |
| ವಾಸ | : | ತಿ. ನರಸೀಪುರ ಪಟ್ಟಣ |

ದಿನಾಂಕಃ 04.10.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ನಾನು 2008 ರಿಂದ 2013 ರವರೆಗೂ ತಿ. ನರಸೀಪುರದ ಪಟ್ಟಣ ಪಂಚಾಯಿತಿಯಲ್ಲಿ ಸದಸ್ಯನಾಗಿದ್ದೆ.

ಈ ದಿನ ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿತನ ಪರಿಚಯವಿದೆ. ಚಾಸಾ-1 ಮತ್ತು 1 ನೇ ಆರೋಪಿತನ ಪರಿಚಯವಿತ್ತು. ಅವರು ಮರಣ ಹೊಂದಿರುತ್ತಾರೆ. ಚಾಸಾ-3 ರಿಂದ 9 ಮತ್ತು 11 ರಿಂದ 14 ರವರ ಪರಿಚಯವಿದೆ. ಅವರು ಆ ಪಟ್ಟಣ ಪಂಚಾಯಿತಿಯಲ್ಲಿ ಸದಸ್ಯರಾಗಿದ್ದರು.

ಸದರಿ ಪಟ್ಟಣ ಪಂಚಾಯಿತಿಯಲ್ಲಿ ಹಣಕಾಸಿನ ವ್ಯತ್ಯಾಸವಾಗಿದೆ ಎಂದು ಅಂದರೆ ಆ ಪಟ್ಟಣ ಪಂಚಾಯಿತಿಯ ಹೆಸರಿನ ಚೆಕ್ಕುಗಳನ್ನು 2 ನೇ ಆರೋಪಿತ ವ್ಯತ್ಯಾಸ ಮಾಡಿದ್ದಾರೆ ಎಂದು ಚಾಸಾ-1 ರವರು ನನಗೆ ಹೇಳಿದ್ದರು. 2 ನೇ ಆರೋಪಿತ

ಚೆಕ್ಕುಗಳನ್ನು ತಿದ್ದಿದ್ದಾರೆಂದು ಚಾಸಾ–1 ರವರು ಪಟ್ಟಣ ಪಂಚಾಯಿತಿಯ ಸಭೆಯಲ್ಲಿ ಹೇಳಿದ್ದರು. ಆ ವಿಷಯವನ್ನು ಹೊರತುಪಡಿಸಿ ಬೇರೆ ವಿಷಯ ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ಭಾಗಶ: ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ಭಾಗಶ: ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

2 ನೇ ಆರೋಪಿತ ಮತ್ತು ಮೃತ 1 ನೇ ಆರೋಪಿತರವರು ಆ ಪಟ್ಟಣ ಪಂಚಾಯಿತಿಯ ನೀರು ನಿರ್ವಹಣೆಗೆ ಸಂಬಂಧಿಸಿದಂತೆ ಸರಿಯಾಗಿ ಲೆಕ್ಕಪತ್ರಗಳನ್ನು ಇಟ್ಟಿರಲಿಲ್ಲವೆಂದು ಚಾಸಾ–1 ರವರು ಹೇಳಿದ್ದರು ಎಂದರೆ ಸರಿ. ಆರೋಪಿತರು ಆ ರೀತಿ ಕೃತ್ಯ ಮಾಡಿ ಬ್ಯಾಂಕಿನಿಂದ ಹಣವನ್ನು ಪಡೆದಿದ್ದರು ಎಂದರೆ ನನಗೆ ಮಾಹಿತಿಯಿಲ್ಲ. ಆ ಹಣವನ್ನು ಸರ್ಕಾರದ ಕೆಲಸಕ್ಕೆ ಬಳಸದೆ ಅವರ ಸ್ವಂತಕ್ಕೆ ಬಳಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ.

2 ನೇ ಆರೋಪಿತ ಆ ಪಂಚಾಯಿತಿಯ ಖಾತೆಯ ರೂ.65,000/– ಹಣವನ್ನು ಮತ್ತು ನೀರಿನ ತೆರಿಗೆ ಬಾಬ್ತು ಖಾತೆಯಿಂದ ರೂ.1,63,000/–ಹಣವನ್ನು ಒಟ್ಟು ರೂ.2,28,000/– ಹಣವನ್ನು ಚಾಸಾ–1 ರವರ ಸಹಿಯನ್ನು ಚೆಕ್ಕುಗಳ ಮೇಲೆ ಸೃಷ್ಟಿಸಿ, ತನ್ನ ಸ್ವಂತಕ್ಕೆ ದುರ್ಬಳಕೆ ಮಾಡಿಕೊಂಡಿರುವ ವಿಷಯ ನನಗೆ ತಿಳಿಯಿತು ಎಂದರೆ ಸರಿ.

ಆರೋಪಿತರು ಸೇರಿ ರೂ.1,98,58,472–00 ನ್ನು ಸ್ವಂತಕ್ಕೆ ದುರ್ಬಳಕೆ ಮಾಡಿಕೊಂಡು ಬಾರಿ ಅವ್ಯವಹಾರ ಮತ್ತು ಭ್ರಷ್ಟಾಚಾರ ಮಾಡಿದ್ದು, ಅವರಿಂದ ಆ ಹಣವನ್ನು ಜಂಟಿಯಾಗಿ, 1 ನೇ ಆರೋಪಿತನಿಂದ ರೂ.40,43,078–00 ನ್ನು ವಸೂಲಿ ಮಾಡಬೇಕು ಎಂದು ಮತ್ತು 2 ನೇ ಆರೋಪಿತನಿಂದ ರೂ.2,28,000–00 ವನ್ನು ವಸೂಲಿ ಮಾಡಬೇಕು ಎಂದು ಸಹಾಯಕ ನಿಯಂತ್ರಕರು ಸ್ಥಳೀಯ ಲೆಕ್ಕಪರಿಶೋಧನ ವರ್ತುಲ, ಮೈಸೂರು ರವರು ಸೂಚಿಸಿದ್ದರು ಎಂದರೆ ನನಗೆ ಮಾಹಿತಿಯಿಲ್ಲ.

ನಾನು ಆ ಕುರಿತು ಪೊಲೀಸರಿಗೆ ಹೇಳಿಕೆಯನ್ನು ದಿನಾಂಕ 12.06.2010 ರಂದು ನೀಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಅದನ್ನು ತಿರಸ್ಕರಿಂದ ಅದನ್ನು ನಿಪಿ.20 ಎಂದು ಗುರುತಿಸಲಾಯಿತು. ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : ಶ್ರೀ ಪಿ.ಎಸ್. ವಕೀಲರಿಂದ 2 ನೇ ಆರೋಪಿತರ ಪರವಾಗಿ :</u>**

2 ನೇ ಆರೋಪಿತ ತಿದ್ದಲ್ಪಟ್ಟಿದ್ದಾರೆ ಎಂದು ಹೇಳಿರುವ ದಾಖಲೆಯನ್ನು ನಾನು ನೋಡಿಲ್ಲ. 2 ನೇ ಆರೋಪಿತ ಮಾಡಿದ್ದಾನೆ ಎಂದು ಹೇಳುವ ಕೃತ್ಯವು ಪಂಚಾಯಿತಿಯ ಪ್ರಮುಖ ಚರ್ಚಾ ವಿಷಯವಾಗಿತ್ತಾ ಎಂದರೆ ನನಗೆ ನೆನಪಿಲ್ಲ. ಆ ಪಂಚಾಯಿತಿಯ ಆಂತರಿಕ ಲೆಕ್ಕ ಪರಿಶೋಧನಾ ವರದಿಯನ್ನು ನಾನು ನೋಡಿಲ್ಲ.

ಚಾಸಾ–1 ರವರ ವಿರುದ್ಧವು ಕೂಡ ಪ್ರಕರಣ ದಾಖಲಿಸಬೇಕು ಎಂದು ಆ ಪರಿಶೋಧನಾ ವರದಿಯಲ್ಲಿ ಪ್ರಸ್ತಾಪಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆರೋಪಿತರ

ಕೃತ್ಯವು ಪಂಚಾಯಿತಿಯ ಸಭೆಯ ಗಮನಕ್ಕೆ ತಂದಾಗ ಮಾತ್ರ ನನಗೆ ಗೊತ್ತಾಗಿದ್ದು, ಪ್ರಕರಣದ ಬಗ್ಗೆ ಸಂಪೂರ್ಣವಾಗಿ ಮಾಹಿತಿ ಇಲ್ಲ ಎಂದರೆ ಸರಿ.

1 ನೇ ಆರೋಪಿತ 2 ನೇ ಆರೋಪಿತನ ಮೇಲಾಧಿಕಾರಿ ಎಂದರೆ ಸರಿ. 1 ನೇ ಆರೋಪಿತನ ನಿರ್ದೇಶನದಂತೆ 2 ನೇ ಆರೋಪಿತ ಕರ್ತವ್ಯ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಘಟನೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಕೂಡ ಆರೋಪಿತರ ವಿರುದ್ಧ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಅದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,**
**ತಿ.ನರಸೀಪುರ.**

**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ.ನರಸೀಪುರ.**

**ಸಿಸಿ ಸಂಖ್ಯೆ: 287/2015. ಚಾ.ಸಾ.6. ಫ್ರಾ.ಸಾ-7.**

| | | |
|---|---|---|
| ಹೆಸರು | : | ಪುಟ್ಟೀರಮ್ಮ ಅಲಿಯಾಸ್ ಆಶಾ |
| ಗಂಡನ ಹೆಸರು | : | ಸಿ. ಮಹದೇವು |
| ವಯಸ್ಸು | : | 55 |
| ವೃತ್ತಿ | : | ಗೃಹಿಣಿ |
| ವಾಸ | : | ತಿ. ನರಸೀಪುರ ಪಟ್ಟಣ |

ದಿನಾಂಕಃ 04.10.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ನಾನು 2008 ರಿಂದ 2013 ರವರೆಗೂ ತಿ. ನರಸೀಪುರದ ಪಟ್ಟಣ ಪಂಚಾಯಿತಿಯಲ್ಲಿ ಸದಸ್ಯನಾಗಿದ್ದೆ.

ಈ ದಿನ ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿತನ ಪರಿಚಯವಿಲ್ಲ. ಚಾಸಾ-1 ಮತ್ತು 1 ನೇ ಆರೋಪಿತನ ಪರಿಚಯವಿತ್ತು. ಅವರು ಮರಣ ಹೊಂದಿರುತ್ತಾರೆ. ಫ್ರಾಸಾ-6, ಚಾಸಾ-3 ರಿಂದ 5, 7 ರಿಂದ 9 ಮತ್ತು 11 ರಿಂದ 14 ರವರ ಪರಿಚಯವಿದೆ. ಅವರು ಆ ಪಟ್ಟಣ ಪಂಚಾಯಿತಿಯಲ್ಲಿ ಸದಸ್ಯರಾಗಿದ್ದರು.

ಸದರಿ ಪಟ್ಟಣ ಪಂಚಾಯಿತಿಯಲ್ಲಿ 2 ನೇ ಆರೋಪಿತ ಅವ್ಯವಹಾರ ಮಾಡಿದ್ದಾರೆಂದು ಚಾಸಾ-1 ರವರು ಪಂಚಾಯಿತಿಯ ಸಭೆಯಲ್ಲಿ ಹೇಳುತ್ತಿದ್ದರು. ಆ ವಿಷಯವನ್ನು ಹೊರತುಪಡಿಸಿ ಬೇರೆ ವಿಷಯದ ಬಗ್ಗೆ ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ಭಾಗಶ: ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ಭಾಗಶ: ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

2 ನೇ ಆರೋಪಿತ ಮತ್ತು ಮೃತ 1 ನೇ ಆರೋಪಿತರವರು ಆ ಪಟ್ಟಣ ಪಂಚಾಯಿತಿಯ ನೀರು ನಿರ್ವಹಣೆಗೆ ಸಂಬಂಧಿಸಿದಂತೆ ಸರಿಯಾಗಿ ಲೆಕ್ಕಪತ್ರಗಳನ್ನು ಇಟ್ಟಿರಲಿಲ್ಲವೆಂದು ಚಾಸಾ–1 ರವರು ಹೇಳಿದ್ದರು ಎಂದರೆ ಸರಿಯಲ್ಲ. ಆರೋಪಿತರು ಆ ರೀತಿ ಕೃತ್ಯ ಮಾಡಿ ಬ್ಯಾಂಕಿನಿಂದ ಹಣವನ್ನು ಪಡೆದಿದ್ದರು ಎಂದರೆ ನನಗೆ ಮಾಹಿತಿಯಿಲ್ಲ. ಆ ಹಣವನ್ನು ಸರ್ಕಾರದ ಕೆಲಸಕ್ಕೆ ಬಳಸದೆ ಅವರ ಸ್ವಂತಕ್ಕೆ ಬಳಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ.

2 ನೇ ಆರೋಪಿತ ಆ ಪಂಚಾಯಿತಿಯ ಖಾತೆಯ ರೂ.65,000/– ಹಣವನ್ನು ಮತ್ತು ನೀರಿನ ತೆರಿಗೆ ಬಾಬ್ತು ಖಾತೆಯಿಂದ ರೂ.1,63,000/–ಹಣವನ್ನು ಒಟ್ಟು ರೂ.2,28,000/– ಹಣವನ್ನು ಚಾಸಾ–1 ರವರ ಸಹಿಯನ್ನು ಚೆಕ್ಕುಗಳ ಮೇಲೆ ಸೃಷ್ಟಿಸಿ, ತನ್ನ ಸ್ವಂತಕ್ಕೆ ದುರ್ಬಳಕೆ ಮಾಡಿಕೊಂಡಿರುವ ವಿಷಯ ನನಗೆ ತಿಳಿಯಿತು ಎಂದರೆ ಚಾಸಾ–1 ರವರು ಆ ರೀತಿ ಹೇಳುತ್ತಿದ್ದು, ನನಗೆ ಗೊತ್ತಿಲ್ಲ.

ಆರೋಪಿತರು ಸೇರಿ ರೂ.1,98,58,472-00 ನ್ನು ಸ್ವಂತಕ್ಕೆ ದುರ್ಬಳಕೆ ಮಾಡಿಕೊಂಡು ಬಾರಿ ಅವ್ಯವಹಾರ ಮತ್ತು ಭ್ರಷ್ಟಾಚಾರ ಮಾಡಿದ್ದು, ಅವರಿಂದ ಆ ಹಣವನ್ನು ಜಂಟಿಯಾಗಿ, 1 ನೇ ಆರೋಪಿತನಿಂದ ರೂ.40,43,078-00 ನ್ನು ವಸೂಲಿ ಮಾಡಬೇಕು ಎಂದು ಮತ್ತು 2 ನೇ ಆರೋಪಿತನಿಂದ ರೂ.2,28,000-00 ವನ್ನು ವಸೂಲಿ ಮಾಡಬೇಕು ಎಂದು ಸಹಾಯಕ ನಿಯಂತ್ರಕರು ಸ್ಥಳೀಯ ಲೆಕ್ಕಪರಿಶೋಧನ ವರ್ತುಲ, ಮೈಸೂರು ರವರು ಸೂಚಿಸಿದ್ದು ಮತ್ತು ಆರೋಪಿತರ ಕೃತ್ಯದ ಮಾಹಿತಿ ಆ ನಿಯಂತ್ರಕರ ವರದಿಯಲ್ಲಿ ನಮೂದಾಗಿತ್ತು ಎಂದರೆ ನನಗೆ ಮಾಹಿತಿಯಿಲ್ಲ.

ನಾನು ಆ ಕುರಿತು ಪೊಲೀಸರಿಗೆ ಹೇಳಿಕೆಯನ್ನು ದಿನಾಂಕ 12.06.2010 ರಂದು ನೀಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಅದನ್ನು ತಿರಸ್ಕರಿಂದ ಅದನ್ನು ನಿಪಿ.21 ಎಂದು ಗುರುತಿಸಲಾಯಿತು. ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಶ್ರೀ ಪಿ.ಎಸ್. ವಕೀಲರಿಂದ 2 ನೇ ಆರೋಪಿತರ ಪರವಾಗಿ :**

2 ನೇ ಆರೋಪಿತ ಮಾಡಿದ್ದಾನೆ ಎಂದು ಹೇಳುವ ಕೃತ್ಯವು ಪಂಚಾಯಿತಿಯ ಪ್ರಮುಖ ಚರ್ಚಾ ವಿಷಯವಾಗಿತ್ತಾ ಎಂದರೆ ನನಗೆ ನೆನಪಿಲ್ಲ. ಆ ಪಂಚಾಯಿತಿಯ ಆಂತರಿಕ ಲೆಕ್ಕ ಪರಿಶೋಧನಾ ವರದಿಯನ್ನು ನಾನು ನೋಡಿಲ್ಲ.

ನನಗೆ ಘಟನೆಯ ಬಗ್ಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಚಾಸಾ-1 ರವರ ಹೇಳಿಕೆ ಮೇರೆಗೆ ಹೇಳುತ್ತಿದ್ದೇನೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಅದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,**
**ತಿ.ನರಸೀಪುರ.**